**9**

**<u>ದಿನಾಂಕಃ 27-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>1 ಮತ್ತು 2 ನೇ ಪ್ರತಿವಾದಿ ಪರ ಪಾಟೀ ಸವಾಲು ಶ್ರೀ ಕೆ ಎಸ್ ವಿ ವಕೀಲರಿಂದಃ-</u>**

1) 1 ನೇ ಪ್ರತಿವಾದಿಯು ಮೀಸೆ ತಿಮ್ಮಣ್ಣನ ಮಗ. ಸರ್ವೆ ನಂ 283 ರ ಜಮೀನು ಸರ್ಕಾರಕ್ಕೆ ಸೇರಿದ್ದು ಇರುತ್ತದೆ. ಸದರಿ ಜಮೀನವು 157 ಎಕರೆ 24 ಗುಂಟೆ ಒಟ್ಟು ಇರುತ್ತದೆ. ಪ್ರತಿವಾದಿಯರ ತಂದೆ ದಾವಾ ಆಸ್ತಿಯನ್ನು ಸುಮಾರು 20 ವರ್ಷಗಳ ಕಾಲ ಉಳುಮೆ ಮಾಡಿರುತ್ತಾರೆ. ಪ್ರತಿವಾದಿಯರ ತಂದೆ ತೀರಿ ಹೋಗುವ ಮುಂಚೆ ಸುಮಾರು 50 ವರ್ಷಗಳಿಂದಲೂ ದಾವಾ ಆಸ್ತಿಯನ್ನು ಉಳುಮೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಮಾರು 20 ರಿಂದ 25 ವರ್ಷಗಳ ಕಾಲ ಉಳುಮೆ ಮಾಡಿರಬೇಕು ಎಂದು ಹೇಳುತ್ತಾರೆ. ಪ್ರತಿವಾದಿಯರ ತಂದೆಯವರು 2007 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ.

2) ಪ್ರತಿವಾದಿಯರ ತಂದೆ ದಾವಾ ಆಸ್ತಿಯಲ್ಲಿ ರಾಗಿ, ಜೋಳ ಬೆಳೆಯುತ್ತಿದ್ದರು. ಮೂಲತಃ ಪ್ರತಿವಾದಿಯರ ತಂದೆ ಶಿವಮೊಗ್ಗ ತಾಲೂಕು ಕುಂಸಿ ಗ್ರಾಮದವರಿರುತ್ತಾರೆ. ದಾವಾ ಆಸ್ತಿಯು ಶಿಕಾರಿಪುರ ತಾಲೂಕಿನ ಹಿರೇ ಜಂಬೂರು ಗ್ರಾಮದಲ್ಲಿ ಇರುತ್ತದೆ. ಪ್ರತಿವಾದಿಯರ ತಂದೆಯು ದಾವಾ ಆಸ್ತಿಯನ್ನು ಬೇರೆಯವರಿಗೆ ಲಾವಣಿ ಹಾಕಿ ಸಾಗುವಳಿ ಮಾಡುತ್ತಿದ್ದರು. ಯಾವ ಯಾವ ವರ್ಷ ಯಾರಿಗೆ ಲಾವಣಿ ಹಾಕಿದ್ದರು ಎಂದು ಹೇಳಲು ಬರುವುದಿಲ್ಲ. ಪ್ರತಿವಾದಿಯರ ತಂದೆ ಕುಂಸಿ ಗ್ರಾಮದವರು ಆಗಿರಲಿಲ್ಲ ಆದರೆ ಚಿಕ್ಕಜಂಬೂರು ಗ್ರಾಮದಲ್ಲಿ ವಾಸ ಮಾಡುತ್ತಾ ಅವರೇದಾವಾ ಆಸ್ತಿ ಸಾಗುವಳಿ ಮಾಡುತ್ತಿದ್ದರು ಮತ್ತು ಯಾರಿಗೂ ನಾನು ಹೇಳಿದಂತೆ ಲಾವಣಿ ಹಾಕುತ್ತಿದ್ದರು ಎಂದರೆ ಸರಿಯಲ್ಲ.

3) ಪ್ರತಿವಾದಿಯರು ಈಗ ಕುಂಸಿ ಗ್ರಾಮದಲ್ಲಿ ವಾಸವಿರುತ್ತಾರೆ. ಪ್ರತಿವಾದಿಯರ ತಂದೆ ಆದ ಮೀಸೆ ತಿಮ್ಮಪ್ಪನಿಗೆ ಚಿಕ್ಕ ಜಂಬೂರು ಗ್ರಾಮದಲ್ಲಿ ಮನೆ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆ ಕಾಡನ್ನು ಕಡಿದು ಸಾಗುವಳಿ ಮಾಡುತ್ತಿದ್ದಾಗ ಎಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿಯು ಚಿಕ್ಕಜಂಬೂರು ಗ್ರಾಮದಲ್ಲಿ ಮತ್ತು ಕುಂಸಿಯಲ್ಲಿ ವಾಸವಿದ್ದರು. ಮೀಸೆ ತಿಮ್ಮಪ್ಪ ಪ್ರತಿವಾದಿಯರ ತಂದೆ ನಮ್ಮ ಅತ್ತೆಯ ಗಂಡ ಆಗಿರುತ್ತಾರೆ. ನನ್ನ ಮತ್ತು ಪ್ರತಿವಾದಿಯರ ಮಾತುಕತೆಯು 2000 ನೇ ಇಸವಿಯಿಂದ ಇರುವುದಿಲ್ಲ. ಏಕೆ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯರ ತಂದೆ ದಾವಾ ಆಸ್ತಿಯನ್ನು ನಮಗೆ ಕ್ರಯಕ್ಕೆ ಕೊಟ್ಟಿದ್ದರು ಆದ್ದರಿಂದ ಮಾತುಕತೆ ಇಲ್ಲ ಎನ್ನುತ್ತಾರೆ. ಪ್ರತಿವಾದಿಯರ ತಂದೆ ನನಗೆ ಕ್ರಯಕೊಟ್ಟಿದ್ದಾರೆ ಎನ್ನುವ ದಿನ ಪ್ರತಿವಾದಿಯರು ಕುಂಸಿ ಗ್ರಾಮದಲ್ಲಿ ಇದ್ದರು.

4) ಕ್ರಯ ಆಗುವ ಮುಂಚೆ ನಮ್ಮ ಮತ್ತು ಪ್ರತಿವಾದಿಯರ ತಂದೆ ಮಧ್ಯೆ ಮಾತುಕತೆ ಆಯಿತು ಎಂದರೆ 12-08-1999 ರಂದು ಮಾತುಕತೆ ಆಗಿರುತ್ತದೆ. ಮಾತುಕತೆಯು ಹಿರೇಜಂಬೂರಿನಲ್ಲಿರುವ ನಮ್ಮ ಮನೆಯಲ್ಲಿ ಆಗಿರುತ್ತದೆ. ಸುಮಾರು ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಮಾತುಕತೆ ಆಗಿರುತ್ತದೆ. ಮಾತುಕತೆ ಆದಾಗ ಪ್ರತಿವಾದಿಯರು 55 ವರ್ಷ ವಯಸ್ಸಿನವರಾಗಿದ್ದರು. ಮಾತುಕತೆ ಆದಾಗ ಪ್ರತಿವಾದಿಯರು ಇರಲಿಲ್ಲ. ಮಾತುಕತೆ ಆದಾಗ ನಾನು, ಮೀಸೆ ತಿಮ್ಮಪ್ಪ , ಜಯಪ್ಪ , ಶಾಂತಪ್ಪ , ದುರುಗಪ್ಪ , ಗಂಗಪ್ಪ ಇದ್ದೆವು. ಅವರೆಲ್ಲರೂ ಹಿರೇ ಜಂಬೂರು ಗ್ರಾಮದವರಿರುತ್ತಾರೆ. ಮಾತಕತೆಗೆ ಅವರೆಲ್ಲರನ್ನು ಮೀಸೆ ತಿಮ್ಮಪ್ಪ ಕರೆದಿದ್ದರು. ಸದರಿ ಮೇಲಿನವರು ಸ್ವಲ್ಪ ಜನ ನನ್ನ ಸಂಬಂಧಿಕರು ಇರುತ್ತಾರೆ ಹಾಗೂ ಬೇರೆ ಜನರು ಇರುತ್ತಾರೆ. ದಿನಾಂಕ 12-08-1999 ರಂದು ಮಾತುಕತೆ ಆದ ದಿನ ಯಾವುದೇ ದಾಖಲೆಗಳನ್ನು ಇಟುಟಕೊಂಡಿರಲಿಲ್ಲ.

5) ಪ್ರತಿವಾದಿಯರ ತಾಯಿ ತೀರಿಕೊಂಡು ಈಗ ಒಂದು ವರ್ಷ ಆಯಿತು. 12-8-1999 ರಂದು ಪ್ರತಿವಾದಿಯರ ತಾಯಿ ಹಾಜರಿರಲಿಲ್ಲ. ಮೀಸೆ ತಿಮ್ಮಪ್ಪ ನನಗೆ ದಾವಾ ಆಸ್ತಿ ಖರೀದಿ ಕೊಡುವುದು ಇದೆ ಎಂದು ಸ್ವತಃ ಹೇಳಿದ್ದರು. ಮಾತುಕತೆ ಆಗುವ 8 ದಿನಗಳ ಮುಂಚೆ ಸದರಿ ವಿಷಯವನ್ನು ಹೇಳಿದ್ದರು. ಮೀಸೆ ತಿಮ್ಮಪ್ಪನಿಗೆ 3 ಜನ ಮಕ್ಕಳು ಇರುತ್ತಾರೆ. ಪ್ರತಿವಾದಿಯರನ್ನು ಹೊರತುಪಡಿಸಿ ಹನುಮಂತಪ್ಪ ಎನ್ನುವವರು ಕುಂಸಿ ಗ್ರಾಮದಲ್ಲಿ ಇರುತ್ತಾರೆ. 12-08-1999 ರಂದು ಮಾತುಕತೆ ಆದ ದಿನ ನಾನು ಯಾವುದೇ ಮುಂಗಡ ಹಣ ಕೊಟ್ಟಿಲ್ಲ. ಮಾತುಕತೆ ಆದ ದಿನ ಯಾವುದೇ ಒಪ್ಪಂದ ಪತ್ರವನ್ನು ಬರೆಸಿಕೊಂಡಿರುವುದಿಲ್ಲ. ಆ ನಂತರ 14-08-1999 ರಂದು ಪತ್ರ ತಂದು ದಾಖಲೆ ಮಾಡಿಕೊಟ್ಟಿರುತ್ತಾರೆ.

6) ನನ್ನ ಪ್ರಮಾಣ ಪತ್ರದಲ್ಲಿ ಮೀಸೆ ತಿಮ್ಮಪ್ಪ ಇಷ್ಟಪಟ್ಟು ಮಾರಾಟ ಮಾಡುತ್ತೇನೆ ಅಂತಾ ಹೇಳಿದ ಬಗೆ ಬರೆದಿದ್ದೀರಾ ಅಥವಾ ನಾನು ಇಷ್ಟಪಟ್ಟು ಖರೀದಿ ಮಾಡುತ್ತೇನೆ ಅಂತಾ ಬರೆದಿದ್ದೀರಾ ಎಂದರೆ ಸಾಕ್ಷಿಯು ಮೀಸೆ ತಿಮ್ಮಪ್ಪ ಇಷ್ಟಪಟ್ಟು ಮಾರಾಟ ಮಾಡುತ್ತೇನೆ ಎಂದು ಹೇಳಿದ ಬಗ್ಗೆ ಬರೆದಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ಇಷ್ಟಪಟ್ಟು ಖರೀದಿ ಮಾಡುತ್ತೇನೆ ಎಂದು ಬರೆಯಿಸಿರುತ್ತೇನೆ ಆದರೂ ಸಹ ಮೀಸೆ ತಿಮ್ಮಪ್ಪ ಇಷ್ಟಪಟ್ಟು ಮಾರಾಟ ಮಾಡುತ್ತೇನೆ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.

ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರುಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.